ದಿನಾಂಕ: 22.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನಬೋಧಿಸಲಾಯಿತು.

**ಪಾಟಿ ಸವಾಲು: 1 ಮತ್ತು 4ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಮ್.ಬಿ.ಬಿ ರವರಿಂದ**:

1) ನಾನು ಅನಕ್ಷರಸ್ಥಳಾಗಿರುತ್ತೇನೆ. ನಾನು ಈ ದಾವೆಯನ್ನು ಸಕ್ರೆಪ್ಪ, ಯಮನವ್ವ, ಸರಸ್ವತಿ, ಸಿದ್ದವ್ವ, ಸಿದ್ದಲಿಂಗಪ್ಪ, ಮಹಾದೇವಿ, ರೇವಪ್ಪ, ಗೋಪಾಲ ರವರ ವಿರುದ್ದ ಹೂಡಿರುತ್ತೇನೆ. ಸಕ್ರೆಪ್ಪ, ಯಮನವ್ವ, ಸರಸ್ವತಿ, ಸಿದ್ದವ್ವ, ಸಿದ್ದಲಿಂಗಪ್ಪ, ಮಹಾದೇವಿ, ರೇವಪ್ಪ, ಗೋಪಾಲ ರವರುಗಳು ಬೇರೆ ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರುಗಳು ಕೂಡಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಕೂಡಿ ಇರುತ್ತಾರೆ ಎಂದು ತೋರಿಸಲು ಪಡಿತರ ಚೀಟಿ ಹಾಜರಪಡಿಸಿರುತ್ತೀರಾ? ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.

2) ದಾವಾ ಆಸ್ತಿಗಳಲ್ಲಿ ನನ್ನ ತಂದೆಯಾದ 1ನೇ ಪ್ರತಿವಾದಿ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯಾದ 1ನೇ ಪ್ರತಿವಾದಿಗೆ, 1)ಬನಪ್ಪ, 2)ರೇವಪ್ಪ, 3)ಸಿದ್ರಾಮಪ್ಪ ರವರು ಸಹೋದರರು ಇರುತ್ತಾರೆ ಎಂದರೆ ಸರಿ. ಅವರುಗಳು ಕುರಿ ಸಾಕಾಣಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ಒಟ್ಟು ಕುಟುಂಬದಲ್ಲಿ ಸುಮಾರು 1200-1400 ಕುರಿಗಳು ಇದ್ದವು ಎಂದರೆ ಸರಿಯಲ್ಲ. ಅವರು ತಮ್ಮ ಕುರಿಗಳನ್ನು ರೈತರ ಹೊಲದಲ್ಲಿ ನಿಲ್ಲಿಸಿ, ರೈತರಿಂದ ಹಣ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅವರು ತಮ್ಮ ಕುರಿ ಸಾಕಾಣಿಕೆಯಿಂದ ಬಂದ ಹಣದಿಂದ ದಾವಾ ಅ.ನಂ.1 ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3) ದಾವಾ ಅ.ನಂ.1 ಸ್ವತ್ತನ್ನು 1ನೇ ಪ್ರತಿವಾದಿ ಮತ್ತು ಆತನ ಸಹೋದರರು ಖರೀದಿಸಿದ್ದರೂ ಕೂಡ ಅವರ ಸಹೋದರನಾದ ರೇವಪ್ಪನ ಹೆಸರಿನಲ್ಲಿ ಸದರಿ ಆಸ್ತಿ ಹಕ್ಕು ದಾಖಲೆ ನಂ.1654 ರ ಪ್ರಕಾರ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನಮ್ಮ ಅಜ್ಜನ ಆಸ್ತಿಯಾಗಿದ್ದು, ಅವರು ಮರಣ ಹೊಂದಿದ ನಂತರ 1ನೇ ಪ್ರತಿವಾದಿ ಮತ್ತು ಆತನ ಸಹೋದರ ಹೆಸರಿಗೆ ಜಂಟಿಯಾಗಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ದಾವಾ ಅ.ನಂ.2 ಸ್ವತ್ತನ್ನು 1ನೇ ಪ್ರತಿವಾದಿ ಮತ್ತು ಆತನ ಸಹೋದರರು 1959 ರಲ್ಲಿ ಮಮದಾಪೂರ ಅನ್ನುವವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಹಕ್ಕು ದಾಖಲೆ ನಂ.1281 ರ ಪ್ರಕಾರ ರೇವಪ್ಪನ ಹೆಸರಿಗೆ ಮಾತ್ರ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನಮ್ಮ ಅಜ್ಜನ ಆಸ್ತಿಯಾಗಿದ್ದು, ಅವರು ಮರಣ ಹೊಂದಿದ ನಂತರ 1ನೇ ಪ್ರತಿವಾದಿ ಮತ್ತು ಆತನ ಸಹೋದರ ಹೆಸರಿಗೆ ಜಂಟಿಯಾಗಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

5) ದಾವಾ ಅ.ನಂ.4 ಸ್ವತ್ತನ್ನು 1ನೇ ಪ್ರತಿವಾದಿ ಮತ್ತು ಆತನ ಸಹೋದರರು 1961 ರಲ್ಲಿ ಅನಂತ ಕುರಬೇಟ ಅನ್ನುವವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಹಕ್ಕು ದಾಖಲೆ ನಂ.1456 ರ ಪ್ರಕಾರ ರೇವಪ್ಪನ ಹೆಸರಿಗೆ ಮಾತ್ರ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನಮ್ಮ ಅಜ್ಜನ ಆಸ್ತಿಯಾಗಿದ್ದು, ಅವರು ಮರಣ ಹೊಂದಿದ ನಂತರ 1ನೇ ಪ್ರತಿವಾದಿ ಮತ್ತು ಆತನ ಸಹೋದರ ಹೆಸರಿಗೆ ಜಂಟಿಯಾಗಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

6) ದಾವಾ ಅ.ನಂ.5 ಸ್ವತ್ತನ್ನು 1ನೇ ಪ್ರತಿವಾದಿ ಮತ್ತು ಆತನ ಸಹೋದರರು 1972 ರಲ್ಲಿ ಲಕ್ಷ್ಮಪ್ಪ ನಂದಿ ಅನ್ನುವವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಹಕ್ಕು ದಾಖಲೆ ನಂ.1909 ರ ಪ್ರಕಾರ ರೇವಪ್ಪನ ಹೆಸರಿಗೆ ಮಾತ್ರ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನಮ್ಮ ಅಜ್ಜನ ಆಸ್ತಿಯಾಗಿದ್ದು, ಅವರು ಮರಣ ಹೊಂದಿದ ನಂತರ 1ನೇ ಪ್ರತಿವಾದಿ ಮತ್ತು ಆತನ ಸಹೋದರ ಹೆಸರಿಗೆ ಜಂಟಿಯಾಗಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

7) ಸದರಿ ಮೇಲಿನ ಆಸ್ತಿಗಳನ್ನು 1ನೇ ಪ್ರತಿವಾದಿ ಮತ್ತು ಆತನ ಸಹೋದರರು ಖರೀದಿ ಮಾಡಿದ ನಂತರ ಅವರುಗಳು ಜಂಟಿಯಾಗಿ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿ ನಮ್ಮ ಅಜ್ಜ ಮರಣ ಹೊಂದಿದ ನಂತರ ಅವರುಗಳು ಜಂಟಿಯಾಗಿ ಸ್ವಾಧೀನದಲ್ಲಿದ್ದರು ಎಂದು ನುಡಿಯುತ್ತಾರೆ.

8) ದಾವಾ ಆಸ್ತಿ ಅ.ನಂ.3 ಮತ್ತು 6 ಇವು ಜವಳು ಭೂಮಿಗಳು ಇರುತ್ತವೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಉತ್ಪನ್ನ ಸರಿಯಾಗಿ ಬರುತ್ತಿರಲಿಲ್ಲಾ ಎಂದರೆ ಸಾಕ್ಷಿ ಮೊದಲು ಬರುತ್ತಿರಲಿಲ್ಲಾ, ಈಗ ಉತ್ಪನ್ನ ಚೆನ್ನಾಗಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳು ಜವಳು ಜಮೀನುಗಳಾಗಿದ್ದರಿಂದ 1ನೇ ಪ್ರತಿವಾದಿ ಮತ್ತು ಆತನ ಸಹೋದರರು ಕುರಿ ಕಾಯುವ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

9) 1ನೇ ಪ್ರತಿವಾದಿ ಮತ್ತು ಆತನ ಸಹೋದರರ ಮಧ್ಯ ಮನಸ್ತಾಪ ಉಂಟಾಗಿದ್ದರಿಂದ ದಾವಾ ಅ.ನಂ.1, 2, 4 ಮತ್ತು 5 ಆಸ್ತಿಗಳನ್ನು

ಎಮ್.ಆರ್.ನಂ.41/2006-07 ರ ಪ್ರಕಾರ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಪಾಲಾಗಿರುತ್ತದೆ, ಆದರೆ ಅವುಗಳು ಖರೀದಿಸಿದ ಆಸ್ತಿಗಳಾಗಿರುವುದಿಲ್ಲಾ ಎಂದು ನುಡಿಯುತ್ತಾರೆ.

10) 1ನೇ ಪ್ರತಿವಾದಿ ನನಗೆ ದಾವಾ ಆಸ್ತಿ ಅ.ನಂ.5 ಸ್ವತ್ತಿನಲ್ಲಿ 2 ಗುಂಟೆ ಜಮೀನನ್ನು ನನ್ನ ಹೆಸರಿಗೆ ಬಿಟ್ಟುಕೊಟ್ಟು, ಸದರಿ ಜಾಗಾದಲ್ಲಿ ರೂ.8-9 ಲಕ್ಷ ಖರ್ಚು ಮಾಡಿ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆಯವರು ಬೇರೆಯವರಿಗೆ ಸದರಿ ಜಾಗಾವನ್ನು ಮಾರಾಟಾ ಮಾಡುತ್ತಿರುವಾಗ ನಾವು ಸದರಿ ಜಾಗಾವನ್ನು ಖರೀದಿ ಮಾಡಿ, ತಗಡಿನ ಮನೆ ಹಾಕಿಕೊಂಡು ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 02 ಗುಂಟೆ ಜಮೀನು 1ನೇ ವಾದಿಯ ಹೆಸರಿನಲ್ಲಿ ದಾಖಲ ಇರುತ್ತದೆ ಎಂದರೆ ಸಾಕ್ಷಿ 1ನೇ ವಾದಿ ನನ್ನ ತಂದೆಯಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲೆ ಹಾಜರಪಡಿಸದೇ ಇದ್ದರೂ ಹಾಜರಪಡಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11) ಸದರಿ 02 ಗುಂಟೆ ಜಮೀನು ಮತ್ತು ಅದರಲ್ಲಿರುವ ಮನೆಯನ್ನು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಸೇರ್ಪಡೆ ಮಾಡಿಲ್ಲಾ ಎಂದರೆ ಸರಿಯಲ್ಲ. ಸದರಿ 02 ಗುಂಟೆ ಜಮೀನು ಮತ್ತು ಅದರಲ್ಲಿರುವ ಮನೆಯನ್ನು ಸೇರಿಸದೇ ಇದ್ದರೂ, ಸೇರಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನಾನು ಮತ್ತು 1ನೇ ವಾದಿ ಕೂಡಿ ವಾಸವಾಗಿರುತ್ತೇವೆ ಎಂದರೆ ಸರಿ.

12) ನನ್ನ ತಂದೆಯಾದ 1ನೇ ಪ್ರತಿವಾದಿಯು, ನನಗೆ ಮತ್ತು 1ನೇ ವಾದಿಗೆ ರೂ.2 ಲಕ್ಷ ಮತ್ತು 5 ಎಮ್ಮೆಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 1ನೇ ವಾದಿ ಮೊದಲ ಹೆಂಡತಿ ನಾನು 2ನೇ ಹೆಂಡತಿ ಎಂದರೆ ಸರಿ. 1ನೇ ವಾದಿಗೆ ಮಕ್ಕಳು ಜನಿಸಿರುವುದಿಲ್ಲಾ ಎಂದರೆ ಸರಿ. ನನಗೆ ಒಬ್ಬ ಹೆಣ್ಣು ಮಗಳು ಇರುತ್ತಾಳೆ ಎಂದರೆ ಸರಿ. ನನ್ನ ಮಗಳನ್ನು 4ನೇ ಪ್ರತಿವಾದಿಯ ಮಗನಿಗೆ ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಆಕೆಯು ತನ್ನ ಗಂಡನ ಮನೆಗೆ ಬಾಳ್ವೆ ಮಾಡಲು ಹೋಗಿರುವುದಿಲ್ಲಾ ಎಂದರೆ ಸಾಕ್ಷಿ ಅವರು ಬಾಳ್ವೆ ಮಾಡಲು ಕರೆದುಕೊಂಡು ಹೋಗದ ಕಾರಣ ಹೋಗಿರುವುದಿಲ್ಲಾ ಎಂದು ನುಡಿಯುತ್ತಾರೆ. ಈ ಕಾರಣಕ್ಕಾಗಿ ನಮಗೂ ಮತ್ತು ತವರು ಮನೆಯವರಿಗೂ ಮನಸ್ಥಾಪ ಇರುತ್ತದೆ ಎಂದರೆ ಸರಿ. ಹಾಗಾಗಿ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು,
ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶಾಂತಮ್ಮ ಮಲ್ಲಿಕಾರ್ಜುನಗೌಡ ಪಿ.)
ಹಿರಿಯ ದಿವಾಣಿ ನ್ಯಾಯಾಧೀಶರು,
ಮೂಡಲಗಿ

ಸಾಕ್ಷಿಯ ಸಹಿ